ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕ: 22.08.2023.

**ಮುಂದುವರೆದ ಮುಖ್ಯ ವಿಚಾರಣೆ:** ವಾದಿಯ ಪರ ವಕೀಲರಿಂದ:

ಇಂದು ನಾನು ದಾವೆಗೆ ಸಂಬಂಧಪಟ್ಟಂತೆ ಕೆಲವು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ, ಅವುಗಳನ್ನು ನನ್ನ ಪರವಾಗಿ ಪರಿಗಣಿಸಬೇಕಾಗಿ ವಿನಂತಿಸಿಕೊಳ್ಳುತ್ತೇನೆ.

ದಾವಾ ಸ್ವತ್ತಿಗೆ ಸಂಬಂಧಪಟ್ಟ ಎರಡು ಆರ್‌ಟಿಸಿಗಳನ್ನು ಕ್ರಮವಾಗಿ ನಿಪಿ-1 ಮತ್ತು ನಿಪಿ-2 ಎಂದು, ಪ್ರತಿವಾದಿ ಬರೆದುಕೊಟ್ಟ ನೋಂದಾಯಿತವಲ್ಲದ ಕ್ರಯ ಕರಾರು ಪತ್ರವನ್ನು ನೋಡಿ ಗುರುತಿಸಿದ್ದು ನಿಪಿ-3 ಎಂದು, ನಿಪಿ-1 ರ ಮೇಲೆ ಸಾಕ್ಷಿ ತಮ್ಮ ಸಹಿ ನೋಡಿ ಗುರುತಿಸಿದ್ದು ನಿಪಿ-3(ಎ) ಎಂದು, 1 ನೇ ಪ್ರತಿವಾದಿ ಹೆಬ್ಬಟ್ಟಿನ ಸಹಿ ಮಾಡಿದ್ದು, ಸಾಕ್ಷಿ ನೋಡಿ ಗುರುತಿಸಿರುತ್ತಾರೆ. 2 ನೇ ಪ್ರತಿವಾದಿ ಸಹಿ ಮಾಡಿದ್ದು, ಸಾಕ್ಷಿ ನೋಡಿ ಗುರುತಿಸಿರುತ್ತಾರೆ ನಿಪಿ-3(ಬಿ) ಎಂದು, ನಿಪಿ-3 ಕ್ಕೆ ರವಿಕುಮಾರು ಮತ್ತು ದೀಪಕ್ ಎಂಬುವವರು ಸಹಿ ಮಾಡಿದ್ದು, ಅವರ ಸಹಿಗಳನ್ನು ನಿಪಿ-3(ಸಿ) ಮತ್ತು ನಿಪಿ-3(ಡಿ) ಎಂದು ಗುರುತಿಸಲಾಯಿತು. ನಿಪಿ-3 ರ ದಾಖಲೆಯನ್ನು ಎಲ್.ಎಂ. ಮೇಟಗೇ ವಕೀಲರು ತಯಾರಿಸಿರುತ್ತಾರೆ. ಹಣ ಕೊಟ್ಟ ಬಗ್ಗೆ ಎರಡು ರಶೀದಿ ಪತ್ರಗಳನ್ನು ಕ್ರಮವಾಗಿ ನಿಪಿ-4 ಮತ್ತು ನಿಪಿ-5 ಎಂದು, ನಿಪಿ-4 ಕ್ಕೆ ಸಾಕ್ಷಿದಾರ 2 ನೇ ಪ್ರತಿವಾದಿ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-4(ಎ) ಎಂದು, ಸಾಕ್ಷಿದಾರರಾದ ರವಿಕುಮಾರು ಮತ್ತು ದೀಪಕ್ ರವರು ಸಹಿ ಮಾಡಿದ್ದು, ಅವರ ಸಹಿಗಳನ್ನು ನಿಪಿ-4(ಬಿ) ಮತ್ತು ನಿಪಿ-4(ಸಿ) ಎಂದು ಗುರುತಿಸಲಾಯಿತು.

ನಿಪಿ-5 ರ ದಾಖಲೆಯಲ್ಲಿ 1 ನೇ ಪ್ರತಿವಾದಿ ಸಹಿ ಮಾಡಿದ್ದು, ಅವರ ಸಹಿಯನ್ನು ಸಾಕ್ಷಿ

ನೋಡಿ ಗುರುತಿಸಿದ್ದು, ಅದನ್ನು ನಿಪಿ-5(ಎ) ಎಂದು, ಸಾಕ್ಷಿದಾರರು ಅಂತ ದೀಪಕ್ ಮತ್ತು ಶೃತಿ ದೇಶಪಾಂಡೆ, ಅಶೋಕ ಹಾಗೂ ಶಿವರಾಜ ಎಂಬುವವರು ಸಹಿ ಮಾಡಿರುತ್ತಾರೆ. ಸಾಕ್ಷಿ ಅವರ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-5(ಬಿ) ರಿಂದ ನಿಪಿ-5(ಎಫ್) ಎಂದು ಗುರುತಿಸಲಾಯಿತು. ದೃಢಿಕೃತ ನಕಲಿನ ಕ್ರಯ ಪತ್ರವನ್ನು ನಿಪಿ-6 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**